ದೃಷ್ಟಿಯಿಂದ, ಸರ್ಕಾರದ ಹಣದ ಉಳಿತಾಯದ ದೃಷ್ಟಿಯಿಂದ ಮತ್ತು ಬೆಂಗಳೂರು ನಗರ ಇವತ್ತು ವಿಪರೀತ ರೀತಿಯಲ್ಲಿ ಬೆಳೆಯುತ್ತಿದೆ ಇದರದೇ ಆದ ಒಂದು ಅಂತರರಾಷ್ಟ್ರೀಯ ಖ್ಯಾತಿ ಇದೆ.

ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಸರ್ಕಾರವು ಮೊದಲು ನಿಶ್ಚಯ ಮಾಡಬೇಕು. ಅವರು ಈ ಬಗ್ಗೆ ನಿಶ್ಚಯ ಮಾಡಿ ಒಂದು ಪೀಠವನ್ನು ದೆಹಲಿಯ ಹೊರಗಡೆ ಕೇಂದ್ರ ಸ್ಥಾನ ಬಿಟ್ಟು ಹೊರಗಡೆ ನಾವು ಸ್ಥಾಪಿಸುತ್ತೇವೆಂದು ಅವರು Policy decision ಅನ್ನು ತೆಗೆದುಕೊಂಡಾಗ ಈ ಬಗ್ಗೆ ಈಗಾಗಲೇ ಹೇಳಿದ್ದೇವೆ. ದಕ್ಷಿಣ ಭಾರತದಲ್ಲಿ ಆಗಬೇಕಾದುದು ಅದು ಬೆಂಗಳೂರಿನಲ್ಲಿ ಆಗಬೇಕೆಂದು ನಾವು ಏನು ಪ್ರತಿಪಾದಿಸಿದ್ದೇವೆ, ಆಗ ನಾವು ವಾದ ಮಾಡಿರುವುದಕ್ಕೆ ಇನ್ನಷ್ಟು ಪುಷ್ಟಿ ಸಿಗುತ್ತದೆ. ನಾವು ನಮ್ಮ ಪ್ರಯತ್ನವನ್ನು , ಒತ್ತಡವನ್ನು ಮುಂದುವರಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಇದು policy matter ಎಂದು ಹೇಳಿದ್ದಾರಲ್ಲ? ಆಯಿತು ಬಿಡಿ.

ಡಾ.ಎ.ಬಿ.ಮಾಲಕರೆಡ್ಡಿ : ತಾವು ಒತ್ತಡವನ್ನು ಹಾಕುತ್ತಿದ್ದೀರೆಂದು ನನಗೆ ಗೊತ್ತಾಯಿತು. ಆ ಬಗ್ಗೆ ಇದರಲ್ಲಿ ಕಂಡು ಬಂದಿರಲಿಲ್ಲ. ಅದಕ್ಕಾಗಿ ಕೇಳಿದ್ದೇನೆ.

ಅಧ್ಯಕ್ಷರು: ಶ್ರೀ ಅಭಯಚಂದ್ರಜೈನ್‌ರವರು ಸದನದಲ್ಲಿಲ್ಲ. ಶ್ರೀ ಪ್ರತಾಪಗೌಡ ಪಾಟೀಲ್‌ರವರೆ, ತಾವು ಪ್ರಶ್ನೆಯನ್ನು ಕೇಳಿ.

ಆಕ್ರಮ ಸಕ್ರಮ ಸಮಿತಿಗೆ ಸರ್ಕಾರದಿಂದ ನಾಮ ನಿರ್ದೇಶನ

(56): 368 ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ)

ಅ) ಲಿಂಗಸುಗೂರು ತಾಲ್ಲೂಕಿನ ಬಹುತೇಕ ಭಾಗದ ತಾಲ್ಲೂಕು ಅಕ್ರಮ ಸಕ್ರಮ ಸಮಿತಿಗೆ ಪ್ರತಿನಿಧಿಸುತ್ತಿರುವ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದು, ಉಳಿದ ಭಾಗಕ್ಕೆ ಪ್ರತಿನಿಧಿಸುತ್ತಿರುವ ಶಾಸಕರನ್ನು ಅಕ್ರಮ ಸಕ್ರಮ ಸಮಿತಿಗೆ ಸದಸ್ಯರನ್ನು ನೇಮಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸಮಿತಿಗೆ ಸದಸ್ಯರನ್ನು ಯಾವಾಗ ನಾಮ ನಿರ್ದೇಶನ ಮಾಡಲಾಗುವುದು.

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರನ್ವಯ ಅಕ್ರಮ-ಸಕ್ರಮ ಸಮಿತಿಗಳನ್ನು ತಾಲ್ಲೂಕುವಾರು ರಚಿಸಲಾಗುತ್ತಿದೆ. ಲಿಂಗಸು-ಗೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ ಲಿಂಗಸುಗೂರು ಮತ್ತು ಮಸ್ಕಿ ಎರಡು ವಿಧಾನಸಭಾ ಕ್ಷೇತ್ರಗಳಿದ್ದು, ಲಿಂಗಸುಗೂರು ತಾಲ್ಲೂಕಿನ ಶಾಸಕರಿಗೆ ತಾಲ್ಲೂಕಿನ ಹೆಚ್ಚುವರಿ ಕ್ಷೇತ್ರ ವ್ಯಾಪ್ತಿ ಬರುವುದರಿಂದ ಅಕ್ರಮ ಸಕ್ರಮ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಲಾಗಿರುತ್ತದೆ.

ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ತಾಲ್ಲೂಕುಗಳಲ್ಲಿ ಬರುವ ಹೆಚ್ಚುವರಿ ಕ್ಷೇತ್ರದ ಶಾಸಕರನ್ನು ಸಮಿತಿಗಳಿಗೆ ಸದಸ್ಯರನ್ನಾಗಿ ನೇಮಿಸಿದರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ನನ್ನ ಕ್ಷೇತ್ರವು ಮೂರು ತಾಲ್ಲೂಕುಗಳನ್ನು ಒಳಗೊಂಡಿರುವ ಕ್ಷೇತ್ರವಾಗಿದೆ. ಆ ಎಲ್ಲಾ ತಾಲ್ಲೂಕುಗಳಲ್ಲಿ ನನ್ನ ಕ್ಷೇತ್ರದ ಜನರಿಗೆ ನ್ಯಾಯವನ್ನು ಒದಗಿಸಬೇಕಾದಾಗ ಆ ಒಂದು ಸಮಿತಿಗೆ ಸದಸ್ಯನಾ-ಗಿದ್ದರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಈಗಾಗಲೇ ಬೇರೆ ಬೇರೆ ಸಮಿತಿಗಳಲ್ಲಿ ಈ ತರಹ ಇರುವಂತಹ ಕ್ಷೇತ್ರಗಳಲ್ಲಿ ಶಾಸಕರುಗಳು ಸದಸ್ಯರಾಗಿರುವುದು ಇವತ್ತು ಅಕ್ರಮ ಸಕ್ರಮ ಸಮಿತಿಗೂ ಸಹ ನಮ್ಮನ್ನು ಸದಸ್ಯರನ್ನಾಗಿ ನೇಮಕ ಮಾಡಿದರೆ ನಮ್ಮ ಕೇತ್ರದ ಜನರಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಅದಕ್ಕೆ ತಾವು ದಯಮಾಡಿ ಇದನ್ನು ಪುನರ್ ಪರಿಶೀಲಿಸಿ ಈ ತರಹ ಇರುವಂತಹ ಕ್ಷೇತ್ರಗಳಿಗೆ ಶಾಸಕರನ್ನು ಅಲ್ಲಿ ಬಿಟ್ಟು ಹೋಗಿರುವಂತಹ ಕ್ಷೇತ್ರಗಳಿಗೆ ಶಾಸಕರು ಅಧ್ಯಕ್ಷರಾಗಿದ್ದರೂ ಸಹ ನಮ್ಮನ್ನು ಸದಸ್ಯರನ್ನಾಗಿ ಪರಿಗಣಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೆನೆ.

ಶ್ರಿ ಕೆ.ಎಸ್.ಈಶ್ವರಪ್ಪ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಗೌರವಾನ್ವಿತ ಶಾಸಕರು ಈ ಅಕ್ರಮ-ಸಕ್ರಮ ತಾಲ್ಲೂಕುವಾರು ಸಮಿತಿ ಏನು ರಚನೆಯಾಗಿದೆ. ಇದಕ್ಕೆ ಹಾಲಿ ತಾಲ್ಲೂಕು ಸಮಿತಿಗಳಿಗೆ ಅಧ್ಯಕ್ಷರು ಅತಿ ಹೆಚ್ಚು ಯಾರು ಜಾಗವನ್ನು ಪಡೆದಿರುತ್ತಾರೋ ಆ ಕ್ಷೇತ್ರದ ಶಾಸಕರೇ ಇವತ್ತು ಅಲ್ಲಿ ಅಧ್ಯಕ್ಷರಾಗುತ್ತಿದ್ದಾರೆ. ಕನಿಷ್ಟ ಬೇರೆ ಬೇರೆ ಕಡಿಮೆ ಜಾಗ ಇರುವಂತಹವರಿಗೆ ಕೋಡ ಶಾಸಕರನ್ನು ಆ ಒಂದು ಸಮಿತಿಗಾದರೂ ಸದಸ್ಯರನ್ನಾಗಿ

ಮಾಡಬೇಕೆಂದು ಅವರ ಅಪೇಕ್ಷೆಯಾಗಿದೆ. ವಿಧಾನಸಭಾ ಕ್ಷೇತ್ರದ ಮಟ್ಟಿಗೆ ಒಂದು ಸಮಿತಿ ಮಾಡಬಹುದು ಎಂದು ನಾವು ಚಿಂತನೆಯನ್ನು ಮಾಡುತಿದ್ದೇವೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಸಮಿತಿಯನ್ನು ಮಾಡಿದರೆ ಆ ಸಮಿತಿ ಅಧ್ಯಕ್ಷರು ಶಾಸಕರಾಗಿಬಿಡುತ್ತಾರೆ. ಆಗ ಈ ತರಹದ ಸಮಸ್ಯೆಗಳು ಇರುವುದಿಲ್ಲ. ತಾಲ್ಲೂಕು ಬಂದಾಗಲೂ ಇರುತ್ತದೆ, ಆಗ ಅಧ್ಯಕ್ಷರು ಬೇರೆ ಇರುತ್ತಾರೆ. ಇಲ್ಲಿ ಅಧ್ಯಕ್ಷರ ಜೊತೆಗೆ ಕಡಿಮೆ ಜಾಗ ಇರುವಂಥ ಆ ಕ್ಷೇತ್ರದ ಶಾಸಕರು ಸದಸ್ಯರಾದರೆ ಹೆಚ್ಚು ಬೆಂಬಲ ಸಿಗಲಿಕ್ಕಿಲ್ಲವೆಂದು ಭಾವಿಸಿ ಕ್ಷೇತ್ರಾವಾರು ಅಕ್ರಮ-ಸಕ್ರಮ ಸಮಿತಿಗಳನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಏನು ಅಕ್ರಮ ಸಕ್ರಮ ಸಮಿತಿಗೆ ತಾಲ್ಲೂಕಿನಲ್ಲಿ ಹೆಚ್ಚುವರಿ ಜಾಗವಿರುವಂತಹ ಅಧ್ಯಕ್ಷರು ಇರುತ್ತಾರೆ ಕನಿಷ್ಠ ಉಪಾಧ್ಯಕ್ಷರಾದರೂ ಕೂಡ ಕಡಿಮೆ ಜಾಗ ಇರುವಂತಹ ವಿಧಾನಸಭಾ ಕ್ಷೇತ್ರದ ಶಾಸಕರನ್ನು ಸಹ ಸದಸ್ಯರನ್ನಾಗಿ ಮಾಡಬೇಕೆಂಬುದರ ಬಗ್ಗೆ ಚಿಂತನೆಯು ನಡೆಯುತ್ತಿದೆ. ವಿಶೇಷವಾಗಿ ಕ್ಷೇತ್ರವಾರು ಸಮಿತಿ ಮಾಡುವುದದ ಬಗ್ಗೆಯೇ ಪರಿಶೀಲನೆಯು ನಡೆಯುತ್ತಿದೆ. ಅದಕ್ಕೆ ಉತ್ತರವನ್ನು ಆದಷ್ಟು ಬೇಗನೆ ಸರ್ಕಾರದ ಗಮನ ಕೊಡುತ್ತದೆ.

ಅಧ್ಯಕ್ಷರು : ಶೀ ಅಮರೇಶ್‌ರವರೆ, ತಾವು ಪ್ರಶ್ನೆಯನ್ನು ಕೇಳಿ.

ಪಹಣಿಗಳ ತಿದ್ದುಪಡಿ

(57) : 327

ಶೀ ಅಮರೇಶ್ (ಮುಳಬಾಗಿಲು)

1. ಮುಳಬಾಗಿಲು ತಾಲ್ಲುಕಿನಲ್ಲಿ ಪಹಣಿಗಳ ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಜಮೀನುಗಳನ್ನು ಪರಬಾರೆ(ಮಾರಾಟ) ಮಾಡಿರುವುದು ಸರ್ಕಾರವ ಗಮನಕ್ಕೆ ಬಂದಿದೆಯೇ;

2. ಹಾಗಿದಲ್ಲಿ ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿದೆ(ವಿವರ ನೀಡುವುದು)

3. ಇದನ್ನು ತಡೆಯಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)